ಓ.ಎಸ್. ನಂಃ **173/2022**
**<u>ಪಿ.ಡಬ್ಲ್ಯೂಃ 1</u>**

ದಿನಾಂಕಃ 09-01-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ಶ್ರೀ ಎಂ ಬಿ ಪಿ ವಕೀಲರಿಂದಃ</u>

ನಾವು ಕಟ್ಟಿರುವ ಮನೆ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತದೆ ಎಂಬುದನ್ನು ತೋರಿಸಲು ನಾನು ದಾಖಲೆ ಹಾಜರು ಮಾಡಿಲ್ಲ. ಸದರಿ ಮನೆ ಕಟ್ಟಿರುವ ಜಾಗ ನಿಮ್ಮ ಹಿರಿಯರಿಂದ ನಿಮಗೆ ಬಂದಿರುತ್ತದೆ ಎಂಬುದನ್ನು ತೋರಿಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು 2007 ರಲ್ಲಿ ಅತಿಯಾದ ಮಳೆಯಾದಾಗ ದಾಖಲಾತಿ ನಾಶವಾಗಿದೆ ಎಂದು ನುಡಿಯುತ್ತಾರೆ. ನಾವು ಮನೆ ಕಟ್ಟಿರುವ ಜಾಗ ನಮಗೆ ಹಿರಿಯರಿಂದ ಬಂದಿರುತ್ತದೆ ಎಂಬುದನ್ನು ನನ್ನ ಪ್ರತಿವಾದ ಪತ್ರ ಹಾಗೂ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಸದರಿ ಜಾಗವನ್ನು ನನ್ನ ತಂದೆ ಹಾಗೂ ಕನಕಪ್ಪ ರವರು ಕಂಬಾರ ನರಸಣ್ಣ ರವರ ಕಡೆಯಿಂದ ಯಾವ ಮೊತ್ತಕ್ಕೆ ಖರೀದಿ ಮಾಡಿದ್ದರು ಎಂಬುದನ್ನು ಪ್ರತಿವಾದ ಪತ್ರ ಹಾಗೂ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಸದರಿ ಖರೀದಿ ಮಾಡಿದ ಜಾಗದ ಅಳತೆ ಪೂರ್ವ-ಪಶ್ಚಿಮ 59 ಅಡಿ ಹಾಗೂ ಉತ್ತರ-ದಕ್ಷಿಣ 79 ಅಡಿ ಇರುತ್ತದೆ. ಸದರಿ ವಿಸ್ತೀರ್ಣವನ್ನು ಪ್ರತಿವಾದ ಪತ್ರ ಹಾಗೂ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಕಂಬಾರ ನರಸಣ್ಣ ರವರು ಸದರಿ ಆಸ್ತಿಯ ಮಾಲಿಕ ಆಗಿದ್ದರು ಎಂಬುದನ್ನು ತೋರಿಸಲು ನಾನು ಪಂಚಾಯಿತಿಯ ದಾಖಲೆಗಳನ್ನು ಹಾಜರು ಮಾಡಿಲ್ಲ. ಸದರಿ ಜಾಗ ನಂತರ ನನ್ನ ತಂದೆಯ ಪಾಲಿಗೆ ಬಂದಿರುತ್ತದೆ ಎಂಬುದನ್ನು ತೋರಿಸಲು ನಾನು ದಾಖಲೆ ಹಾಜರು ಮಾಡಿಲ್ಲ. ಸದರಿ ಜಾಗದ ಚೆಕ್ ಬಂದಿಯನ್ನು ಪ್ರತಿವಾದ ಪತ್ರ ಹಾಗೂ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ.

ಗ್ರಂಥಾಲಯದ ದಕ್ಷಿಣಕ್ಕೆ ಸರಕಾರದ ಕಾಂಪೌಂಡ್ ಗೋಡೆ ಹಾಗೂ ಆ ನಂತರ ನಾವು ಹೊಸದಾಗಿ ಕಟ್ಟಿದ ಮನೆ ಇದೆ. ಸದರಿ ಗ್ರಂಥಾಲಯವೂ ಸಹ ದಾವಾ ಸರ್ವೆ ನಂಬರಿನ ಜಮೀನಿನಲ್ಲಿ ಇದೆ ಎಂದರೆ ಸರಿಯಲ್ಲ. ನಮ್ಮ ಮನೆಯ ಉತ್ತರಕ್ಕೆ ಸರಕಾರದವರು ಕಟ್ಟಿಸಿದ ಕಾಂಪೌಂಡ್ ಗೋಡೆ ಹಾಗೂ ಆ ನಂತರ ಗ್ರಂಥಾಲಯ ಇರುತ್ತದೆ. ನಾವು ಕಟ್ಟಿರುವ ಮನೆ ದಾವಾ ಸರ್ವೆ ನಂಬರ ಜಮೀನಿನ ಪೂರ್ವ ಹಾಗೂ ದಕ್ಷಿಣದ ಮೂಲೆಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ.

ನಿಡಿ-17 ರಲ್ಲಿ ಕಾಣಿಸುವ ನೀರಿನ ಟ್ಯಾಂಕ್ ಸರಕಾರಿ ಜಾಗದಲ್ಲಿ ಇರುತ್ತದೆ. ಸದರಿ ಸರಕಾರಿ ಜಾಗ ದಾವಾ ಜಮೀನಿನ ಪೂರ್ವಕ್ಕೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ನೀರಿನ ಟ್ಯಾಂಕ್ ವಾದಿಯ ಸರ್ವೆ ನಂ.586 ರ ಜಮೀನಿನ ಪೂರ್ವಕ್ಕೆ ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-7 ರ ನಕಾಶೆಯನ್ನು ತೋರಿಸಿ ನೀವು ಮನೆ ಕಟ್ಟಿರುವ ಜಾಗ ದಾವಾ ಸರ್ವೆ ನಂ.585/1 ರ ಪೂರ್ವ ಮತ್ತು ದಕ್ಷಿಣದ ಮೂಲೆಯಲ್ಲಿ ಬರುತ್ತದೆ ಎಂದರೆ ಸಾಕ್ಷಿ ಸದರಿ ನಕಾಶೆ ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. ದಿಶಾಂಕ್ ಆಪ್ ನಲ್ಲಿನ ನಕಾಶೆಯ ಪ್ರಕಾರವೂ ಸಹ ನಾವು ಮನೆ ಕಟ್ಟಿರುವ ಜಾಗ ವಾದಿಯ ಜಮೀನಿನಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-4 ರ ಫೋಟೋವನ್ನು ತೋರಿಸಿ ಅದರಲ್ಲಿ ಕೆಂಪು ಶಾಹೆಯಿಂದ ಚೌಕಾಕಾರದಲ್ಲಿ ಗುರುತಿಸಲಾದ ಜಾಗ ನೀವು ಹೊಸದಾಗಿ ಕಟ್ಟಿರುವ ಮನೆ ಆಗಿರುತ್ತದೆ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ಸದರಿ ಜಾಗ ಗ್ರಾಮಠಾಣಾದಲ್ಲಿ ಬರುತ್ತದೆ. ಸದರಿ ಜಾಗ ವಾದಿಯ ಜಮೀನಿನಲ್ಲಿ ಬರುತ್ತದೆಯೋ ಅಥವಾ ಗ್ರಾಮಠಾಣಾದಲ್ಲಿ ಬರುತ್ತದೆಯೋ ಎಂಬುದನ್ನು ತಿಳಿದುಕೊಳ್ಳಲು ಸರ್ವೆ ಮಾಡಿಸಲು ನನ್ನದು ತಕರಾರು ಇರುವುದಿಲ್ಲ. ನಾವು ಹೊಸದಾಗಿ ಕಟ್ಟಿರುವ ಮನೆಯ ದಕ್ಷಿಣಕ್ಕೆ ನಮ್ಮ ಹಳೆಯ ಮನೆ ಹಾಗೂ ಅದಾದ ನಂತರ ಸಂಗರೆಡ್ಡಿ ರವರ ಮನೆ ಬರುತ್ತದೆ. ಸಂಗರೆಡ್ಡಿ ರವರ ದೊಡ್ಡಿ ಜಾಗದ ಉತ್ತರಕ್ಕೆ ಸರ್ವೆ ನಂ.586 ರ ಜಮೀನು ಇದೆ. ನಾವು ಅಕ್ರಮವಾಗಿ ದಾವಾ ಜಮೀನಿನಲ್ಲಿ ಮನೆ ಕಟ್ಟಿರುವುದರಿಂದ ವಾದಿ ಈ ದಾವೆ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮನೆ ಕಟ್ಟಲು ನಮಗೆ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.585/1 ರಲ್ಲಿನ 09 ಎಕರೆ ಜಮೀನಿಗೂ ಹಾಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ.

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ